## ನಿವೇದನೆ

# ಮಹಿಳೆಯರ ಆತ್ಮಹತ್ಯೆ

ನಮ್ಮದು ಹಲವು ಧರ್ಮ ಮತ್ತು ಸಂಸ್ಕೃತಿಗಳಿಗೆ ಆಶ್ರಯ ನೀಡಿರುವ ದೇಶ. ಇಲ್ಲಿರುವಷ್ಟು ಧರ್ಮಗಳು ಜಗತ್ತಿನ ಬೇರಾವ ದೇಶದಲ್ಲೂ ಇಲ್ಲ. ಬಹುತೇಕ ಎಲ್ಲ ಧರ್ಮಗಳೂ ಆತ್ಮಹತ್ಯೆಯನ್ನು ಮಹಾಪಾಪ ಎಂದು ಪರಿಗಣಿಸುತ್ತವೆ. ನಮ್ಮ ದೇಶದಲ್ಲಿರುವಷ್ಟು ಧರ್ಮಭೀರು ಜನರು ಇನ್ನೆಲ್ಲೂ ಕಾಣಸಿಗುವುದಿಲ್ಲ. ಹಾಗಿದ್ದೂ ನಮ್ಮಲ್ಲಿ ಆತ್ಮಹತ್ಯೆಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಏರುತ್ತಿರುವುದೇಕೆ? ಅದರಲ್ಲೂ ಮಹಿಳೆಯರು ದೊಡ್ಡ ಸಂಖ್ಯೆಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದೇಕೆ? ಕಳೆದ ವಾರ ಪ್ರಕಟವಾದ ಲ್ಯಾನ್ಸೆಟ್ ಪಬ್ಲಿಕ್ ಹೆಲ್ತ್ ಜರ್ನಲ್‌ನ ಸಮೀಕ್ಷೆಯೊಂದು ಭಾರತದಲ್ಲಿ ಹೆಚ್ಚುತ್ತಿರುವ ಮಹಿಳೆಯರ ಆತ್ಮಹತ್ಯೆಗಳ ಕಡೆಗೆ ಎಲ್ಲರ ಗಮನ ಸೆಳೆದಿದೆ. 2016ರಲ್ಲಿ ಜಗತ್ತಿನಲ್ಲಿ ಆತ್ಮಹತ್ಯೆ ಮಾಡಿಕೊಂಡ ಪ್ರತಿ ಹತ್ತು ಮಹಿಳೆಯರಲ್ಲಿ ನಾಲ್ವರು ಭಾರತೀಯರು ಎನ್ನುವ ಅಂಶವನ್ನು ಈ ಸಮೀಕ್ಷೆ ಬಯಲಿಗೆ ತಂದಿದೆ. ಅಂದರೆ ಜಗತ್ತಿನಲ್ಲಿ ಆತ್ಮಹತ್ಯೆ ಮಾಡಿಕೊಂಡ ಮಹಿಳೆಯರಲ್ಲಿ ಶೇಕಡಾ 37ರಷ್ಟು ಭಾರತೀಯರು.

ದೇಶವೊಂದು ತಕ್ಷಣ ಸಂಸತ್ತಿನ ಸಭೆ ಕರೆದು ಚರ್ಚಿಸಬೇಕಾದಂತಹ ಅತ್ಯಂತ ಕಳವಳಕಾರಿ ಸುದ್ದಿಯಿದು. ಆದರೆ ನಮ್ಮಲ್ಲಿ ಇಂತಹ ಜ್ವಲಂತ ಸಮಸ್ಯೆಗಳ ಬಗ್ಗೆ ಸಂಸದೀಯ ಚರ್ಚೆ ನಡೆಯುವ ಯಾವ ಲಕ್ಷಣಗಳೂ ಗೋಚರಿಸುತ್ತಿಲ್ಲ. ಒಂದು ಸಮಾಜದಲ್ಲಿ ಹೆಣ್ಣುಮಕ್ಕಳು ಇಷ್ಟೊಂದು ಆತಂಕದಲ್ಲಿ ಬದುಕುತ್ತಿದ್ದಾರೆಂದರೆ ಅದೊಂದು ಸರ್ಕಾರದ ವೈಫಲ್ಯ ಎಂದು ಅರ್ಥೈಸಬೇಕಿಲ್ಲ. ಅದು ಒಟ್ಟು ಸಮಾಜದ ಮಾನಸಿಕ ಆರೋಗ್ಯದ ಪ್ರಶ್ನೆ. ಕೌಟುಂಬಿಕ ವ್ಯವಸ್ಥೆ ದಾರುಣವಾಗಿ ವಿಫಲಗೊಳ್ಳುತ್ತಿರುವುದರ ಮುನ್ಸೂಚನೆ. ಏಕೆಂದರೆ ಆತ್ಮಹತ್ಯೆ ಮಾಡಿಕೊಂಡ ಬಹುತೇಕ ಮಹಿಳೆಯರು ವಿವಾಹಿತರು ಎಂಬ ಅಂಶವನ್ನೂ ಈ ಸಮೀಕ್ಷೆ ಒತ್ತಿ ಹೇಳಿದೆ. ಮಾತ್ರವಲ್ಲ, ಆತ್ಮಹತ್ಯೆ ಮಾಡಿಕೊಂಡ ಮಹಿಳೆಯರಲ್ಲಿ ಹೆಚ್ಚಿನವರು 40 ವರ್ಷ ವಯಸ್ಸಿಗಿಂತ ಕಡಿಮೆಯವರು ಎನ್ನುವುದೂ ಗಮನಿಸಬೇಕಾದ ಅಂಶ.

ಒಂದು ಸಮಾಜದಲ್ಲಿ ಹೆಣ್ಣುಮಕ್ಕಳು ಇಷ್ಟೊಂದು ಆತಂಕದಲ್ಲಿ ಬದುಕುತ್ತಿದ್ದಾರೆಂದರೆ ಅದೊಂದು ಸರ್ಕಾರದ ವೈಫಲ್ಯ ಎಂದು ಅರ್ಥೈಸಬೇಕಿಲ್ಲ. ಅದು ಒಟ್ಟು ಸಮಾಜದ ಮಾನಸಿಕ ಆರೋಗ್ಯದ ಪ್ರಶ್ನೆ. ಕೌಟುಂಬಿಕ ವ್ಯವಸ್ಥೆ ದಾರುಣವಾಗಿ ವಿಫಲಗೊಳ್ಳುತ್ತಿರುವುದರ ಮುನ್ಸೂಚನೆ.

ನಮ್ಮಲ್ಲಿ ಮದುವೆಗಳೇಕೆ ವಿಫಲಗೊಳ್ಳುತ್ತಿವೆ? ಅದರಲ್ಲೂ ಮದುವೆಯ ವೈಫಲ್ಯಕ್ಕೆ ಹೆಣ್ಣಿನ ಆತ್ಮಹತ್ಯೆಯೇ ಏಕೆ ಪರಿಹಾರ ಎಂಬಂತೆ ಭಾಸವಾಗುತ್ತಿದೆ? ಹೆಣ್ಣನ್ನು ದೇವತೆ ಎಂದು ಪೂಜಿಸುವ ನಾವು, ಆಕೆಗೆ ಸ್ವಸ್ಥ ಬದುಕನ್ನು ಕಟ್ಟಿಕೊಳ್ಳಲು ಪೂರಕ ವಾತಾವರಣವನ್ನು ನಿರ್ಮಿಸುತ್ತಿಲ್ಲವೆ? ಬೇರೆ ದೇಶಗಳಲ್ಲಿ ಮದುವೆಗಳು ವಿಫಲವಾದರೆ ಮರುಮದುವೆಗಳು ಸರಾಗವಾಗಿ ನಡೆಯುತ್ತಿವೆಯಲ್ಲ. ನಾವೇಕೆ ಮದುವೆಯ ವೈಫಲ್ಯಗಳನ್ನು ಹೆಣ್ಣಿನ ಅಪರಾಧ ಎಂದು ಪರಿಗಣಿಸುತ್ತಿದ್ದೇವೆ? ಭಾರತೀಯರು ಅತ್ಯಂತ ಗಂಭೀರವಾಗಿ ಚರ್ಚಿಸಿ ಪರಿಹಾರ ಕಂಡುಕೊಳ್ಳಬೇಕಾದ ಪ್ರಶ್ನೆಗಳಿವು. ಸಾಮಾಜಿಕ ಜಾಲತಾಣಗಳಲ್ಲಿ ನಾವು ನೂರಾರು ಸಾಮಾಜಿಕ ಪ್ರಶ್ನೆಗಳನ್ನು ಎತ್ತಿಕೊಂಡು ಅರಿಭಯಂಕರ ವಾಗ್ವಾದಗಳನ್ನು ಮಂಡಿಸುತ್ತಿದ್ದೇವೆ. ಆದರೆ ಮಹಿಳೆಯರ ಆತ್ಮಹತ್ಯೆ ಹೆಚ್ಚುತ್ತಿರುವುದರ ಬಗ್ಗೆ ಚರ್ಚಿಸುವ ಲಕ್ಷಣಗಳು ಕಾಣುತ್ತಿಲ್ಲ. ಚರ್ಚೆ ಆದರೆ ತಾನೇ ಪರಿಹಾರ ಗೋಚರಿಸುವುದು?

ಮುಖ್ಯವಾಗಿ 'ಹೆಣ್ಣು ಗಂಡಿನ ಆಸ್ತಿ' ಎಂಬ ಪಾಳೇಗಾರಿ ಪರಿಕಲ್ಪನೆಯೇ ಬಹುತೇಕ ಹೆಣ್ಣಮಕ್ಕಳ ಸಂಕಟಗಳಿಗೆ ಕಾರಣ ಎನ್ನುವುದು ನಿಸ್ಸಂಶಯ. ಮನುಷ್ಯ ಸಮಾನತೆಯ ಪರಿಕಲ್ಪನೆ ನಮ್ಮಲ್ಲಿ ಇನ್ನೂ ಸಾಂಸ್ಕೃತಿಕವಾಗಿ ಬೇರೂರಿಲ್ಲ. ಪಿತೃಪ್ರಧಾನ ವ್ಯವಸ್ಥೆಯ ಲೋಪದೋಷಗಳು, ಮದುವೆಯ ವಿಷಯದಲ್ಲಿ ಹೆಣ್ಣಿಗೆ ನಿರ್ಧಾರ ಕೈಗೊಳ್ಳುವ ಸ್ವಾತಂತ್ರ್ಯ ಇಲ್ಲದಿರುವುದು ಅಥವಾ ಅಭಿಪ್ರಾಯ ವ್ಯಕ್ತಪಡಿಸುವ ಅವಕಾಶಗಳು ಸಿಗದಿರುವುದು, ಗಂಡಿನ ಮತ್ತು ಗಂಡು ಹೆತ್ತವರ ವರದಕ್ಷಿಣೆಯ ದಾಹ, ಬಾಲ್ಯವಿವಾಹ– ಹೀಗೆ ಎಲ್ಲವೂ ಇಲ್ಲಿ ಮಹಿಳೆಗೆ ಮದುವೆಯೇ ಒಂದು ದುಃಸ್ವಪ್ನ ಎನ್ನುವಂತಹ ವಾತಾವರಣವನ್ನು ಸೃಷ್ಟಿಸಿದೆ.

ಮಹಿಳೆಯರ ಈ ಆತ್ಮಹತ್ಯೆಯ ಪ್ರಕರಣಗಳಲ್ಲಿ ದುಡಿಯುವ ಮಹಿಳೆಯರ ಸಂಖ್ಯೆ ಎಷ್ಟು ಎನ್ನುವುದು ಸಮೀಕ್ಷೆಯಲ್ಲಿ ಸ್ಪಷ್ಟವಾಗಿಲ್ಲ. ಈ ನಿಟ್ಟಿನಲ್ಲಿಯೂ ಸಂಶೋಧನೆ ನಡೆಯಬೇಕಿದೆ. ಏಕೆಂದರೆ ನಮ್ಮ ಸಮಾಜದಲ್ಲಿ ಹೆಣ್ಣುಮಕ್ಕಳು ಮನೆಯಲ್ಲಿ ಮಾಡುವ ದುಡಿಮೆಗೆ ಮನ್ನಣೆಯೇ ಇಲ್ಲ ಎನ್ನುವಂತಹ ಪರಿಸ್ಥಿತಿ ಇದೆ. ಜೊತೆಗೆ ಕುಟುಂಬದ ಆರ್ಥಿಕ ಪರಿಸ್ಥಿತಿಯನ್ನು ಸರಿದೂಗಿಸಲು ಹೊರಗೂ ಹೋಗಿ ದುಡಿಯಬೇಕಾದ ಅನಿವಾರ್ಯತೆ ಇದೆ. ಒಳಹೊರಗಿನ ಈ ನಿರಂತರ ದುಡಿಮೆಯಲ್ಲಿ ದೈಹಿಕ, ಮಾನಸಿಕ ಒತ್ತಡಗಳಿಗೆ ಸಿಲುಕುವ ಮಹಿಳೆಯರಿಗೆ ನೆರವಾಗುವ ಕೌನ್ಸಿಲಿಂಗ್ ವ್ಯವಸ್ಥೆಯೂ ನಮ್ಮಲ್ಲಿ ಇಲ್ಲ. ಹೆಣ್ಣನ್ನು ಗೌರವದಿಂದ ಕಾಣುವ, ಹೆಣ್ಣು ಕುಟುಂಬದ ಸರ್ವಸ್ವ ಎಂದು ಭಾವಿಸುವ ಗಂಡಸರ ಸಂಖ್ಯೆಯೂ ನಮ್ಮಲ್ಲಿ ಕಡಿಮೆಯಾಗುತ್ತಿದೆ. ಕೇವಲ ಕಾನೂನು ತಿದ್ದುಪಡಿಗಳಿಂದ ಸಾಧ್ಯವಾಗುವ ಕೆಲಸ ಇದಲ್ಲ. ಅದರ ಜತೆಗೆ ಸಮಾಜದ ಚಿಂತನಾ ವಿಧಾನವೂ ಬದಲಾಗಬೇಕಾದ ಅಗತ್ಯವಿದೆ.

■ ಬಿ.ಎಂ.ಹನೀಫ್



ಈಶ್ವರ್